# 'ವಾಚೋ' ರಕ್ತಚಂದನ!





ನಿರ್ದೇಶಕ ಬಿ.ಎಂ. ಗಿರಿರಾಜ್ 'ರಕ್ತಚಂದನ' ಎಂಬ ವೆಬ್‌ಸೀರೀಸ್ ನಿರ್ದೇಶಿಸಿರುವುದು ಗೊತ್ತೇ ಇದೆ. ಇಪ್ಪತ್ತು ನಿಮಿಷಗಳ ಹನ್ನೊಂದು ಕಂತುಗಳಲ್ಲಿರುವ ಈ ವೆಬ್‌ಸೀರೀಸ್ ಪೂರ್ಣಗೊಂಡಿರುವುದಲ್ಲದೇ ಈಗಾಗಲೇ ಅಂತರ್ಜಾಲದಲ್ಲಿ ವೀಕ್ಷಣೆಗೆ ಲಭ್ಯವಾಗಿದೆ. 'ವಾಚೋ' ಎಂಬ ಆ್ಯಪ್‌ನಲ್ಲಿ 'ರಕ್ತಚಂದನ'ವನ್ನು ವೀಕ್ಷಿಸಬಹುದು.

ಡಿಟಿಎಚ್ ರೀಲಾಂಚ್ ಆಗುತ್ತಿದ್ದು, ಅಂತರ್ಜಾಲ ಮನರಂಜನಾ ಮಾರುಕಟ್ಟೆಗೂ ಬರಲು ನಿರ್ಧರಿಸಿದೆ. ಈ ಉದ್ದೇಶದಿಂದಲೇ ಅದು ಇಂಗ್ಲಿಷಿನ ವಾಚ್ ಮತ್ತು ಹಿಂದಿಯ ದೇಖೋ ಎಂಬ ಎರಡು ಶಬ್ದಗಳನ್ನು ಸೇರಿಸಿ 'ವಾಚೋ' ಎಂಬ ಆ್ಯಪ್ ರೂಪಿಸಿದೆ. ಇದರಲ್ಲಿ ಹಲವು ಪ್ರಾದೇಶಿಕ ಭಾಷೆಗಳ ವೆಬ್ ಕಂಟೆಂಟ್‌ಗಳನ್ನೂ ನೋಡುಗರಿಗೆ ಒದಗಿಸುವ ಯೋಜನೆಯನ್ನು ಹೊಂದಿದೆ. ಕನ್ನಡದಲ್ಲಿ 'ರಕ್ತಚಂದನ' ವೆಬ್‌ಸೀರೀಸ್ ಅನ್ನೂ ಡಿಟಿಎಚ್ ಖರೀದಿಸಿದ್ದು ಈಗಾಗಲೇ 'ವಾಚೋ' ವೇದಿಕೆಯಲ್ಲಿ ಬಿಡುಗಡೆಯನ್ನೂ ಮಾಡಿದೆ.

'ವಾಚೋ ಆ್ಯಪ್ ಈಗಾಗಲೇ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದೆ. ಆದರೆ ಭಾರತದ ಬೇರೆ ಬೇರೆ ಭಾಷೆಗಳಲ್ಲಿ ಒಟ್ಟಿಗೇ ಆ್ಯಪ್ ಅನ್ನು ಲಾಂಚ್ ಮಾಡಬೇಕು ಎಂಬ ಕಾರಣಕ್ಕೆ ಇನ್ನೂ ಅಧಿಕೃತವಾಗಿ ಘೋಷಿಸಿಲ್ಲ. ಹಾಗಾಗಿ ಪ್ರಚಾರವನ್ನೂ ಮಾಡುತ್ತಿಲ್ಲ. ಆದರೆ ಈಗಾಗಲೇ ಪ್ಲೇಸ್ಟೋರ್‌ನಲ್ಲಿ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ರಕ್ತಚಂದನ ನೋಡಿದ ಹಲವರು ನಮಗೆ ಮೆಚ್ಚುಗೆ ಸೂಚಿಸುತ್ತಿದ್ದಾರೆ' ಎಂದು ಹೇಳಿಕೊಳ್ಳುತ್ತಾರೆ ಗಿರಿರಾಜ್.

'ಕನ್ನಡದಲ್ಲಿ ಈಗಷ್ಟೇ ವೆಬ್ ಕಂಟೆಂಟ್ ಸೃಷ್ಟಿಯಾಗುತ್ತಿವೆ. ಹಾಗಾಗಿ ರಿಸ್ಕ್ ಕೂಡ ಇದೆ. ನಾವು ಈ ವೆಬ್‌ಸೀರೀಸ್ ಆರಂಭಿಸಿದ್ದು ಪೂರ್ತಿ ರಿಸ್ಕ್ ತೆಗೆದುಕೊಂಡೇ. ಬಜೆಟ್ ಕೂಡ ಅಂದುಕೊಂಡಿದ್ದಕ್ಕಿಂತ ಹೆಚ್ಚೇ ಆಯಿತು. ನಮ್ಮ ಅದೃಷ್ಟಕ್ಕೆ ವೆಬ್‌ಸೀರೀಸ್ ಮುಗಿಯುತ್ತಿರುವ ಹಾಗೆಯೇ ಕನ್ನಡದಲ್ಲಿ ವೆಬ್ ಕಂಟೆಂಟ್ ಹುಡುಕುತ್ತಿರುವ ಕಂಪನಿ ಸಿಕ್ಕಿತು. ರಕ್ತಚಂದನವನ್ನು ನೋಡಿ ಇಷ್ಟಪಟ್ಟು ಖರೀದಿಸಿತು' ಎಂದು ವಿವರಣೆ ನೀಡುವ ಅವರು 'ಇದರಿಂದ ತುಂಬ ಲಾಭ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗಿಲ್ಲ. ಆದರೆ ಬಂಡವಾಳ ವಾಪಸ್ ಬಂದಿದೆ. ನಾವು ಸೇಫ್ ಆಗಿದ್ದೇವೆ' ಎನ್ನುತ್ತಾರೆ.

ಅದ್ವಿಕಾ, ಭಜರಂಗಿ ಲೋಕಿ ಮತ್ತು ಧನ್ಯಾ ಬಾಲಕೃಷ್ಣ ಮುಖ್ಯಭೂಮಿಕೆಯಲ್ಲಿ ನಟಿಸಿರುವ 'ರಕ್ತಚಂದನ' ಕ್ರೈಂ ಥ್ರಿಲ್ಲರ್ ಆಗಿರುವುದರಿಂದ ಜನರಿಗೆ ಇಷ್ಟವಾಗುತ್ತದೆ ಎಂಬ ನಂಬಿಕೆ ಅವರದು.

ಮುಂದೆ ಇನ್ನಷ್ಟು ವೆಬ್‌ಸೀರೀಸ್‌ಗಳನ್ನು ನಿರ್ದೇಶಿಸುವ ಆಸೆ ಗಿರಿರಾಜ್ ಅವರಿಗಿದೆ. ಆದರೆ 'ರಿಸ್ಕ್ ತೆಗೆದುಕೊಳ್ಳಲಾರೆ' ಎಂದೂ ಸ್ಪಷ್ಟವಾಗಿಯೇ ಹೇಳುತ್ತಾರೆ. 'ವೆಬ್‌ಸೀರೀಸ್‌ಗಳಲ್ಲಿ ನಿರ್ದೇಶಕರಿಗೆ ಕಂಟೆಂಟ್ ಮೇಲೆ ಸಂಪೂರ್ಣ ಸ್ವಾತಂತ್ರ್ಯ ಇರುತ್ತದೆ. ಅದು ಖುಷಿ ಕೊಡುತ್ತದೆ. ಯಾರಾದರೂ ಹಣ ಹೂಡಲು ಮುಂದೆ ಬಂದರೆ ಖಂಡಿತ ಇನ್ನಷ್ಟು ವೆಬ್‌ಸೀರೀಸ್ ನಿರ್ದೇಶಿಸುವ ಆಸೆ ಇದೆ' ಎನ್ನುತ್ತಾರೆ ಗಿರಿರಾಜ್.

# ರಾಘಣ್ಣ 25 ನಾಟ್‌ಔಟ್!



'ಅಮ್ಮನ ಮನೆ' ಮೂಲಕ ದಶಕದ ನಂತರ ನಟನಾ ವೃತ್ತಿಗೆ ಮರಳಿದ್ದಾರೆ ರಾಘವೇಂದ್ರ ರಾಜ್‌ಕುಮಾರ್. 'ಅಮ್ಮನ ಮನೆ ನನಗೆ ಸಿನಿಮಾ ಅಲ್ಲ; ಅದು ನನ್ನ ಪಾಲಿಗೆ ಥೆರಪಿ' ಎಂದಿದ್ದರು ರಾಘಣ್ಣ. ಅವರ ಮಾತು ನಿಜವಾಗುವ ಎಲ್ಲ ಲಕ್ಷಣಗಳೂ ಕಾಣಿಸುತ್ತಿವೆ. ಆರು ವರ್ಷಗಳ ಅನಾರೋಗ್ಯದ ನಂತರ ನಟಿಸಿದ ಈ ಸಿನಿಮಾ ಅವರ ದೈಹಿಕ ಆರೋಗ್ಯದ ಮೇಲೆ ಯಾವ ಪರಿಣಾಮ ಬೀರಿದೆಯೋ ಗೊತ್ತಿಲ್ಲ, ಆದರೆ ಮಾನಸಿಕವಾಗಿಯಂತೂ ಇನ್ನಷ್ಟು ಚೇತೋಹಾರಿಯನ್ನಾಗಿ ಮಾಡಿದೆ.

'ಅಮ್ಮನ ಮನೆ' ತೆರೆ ಕಾಣುತ್ತಿರುವ ಹಾಗೆಯೇ ಅವರು ಇನ್ನಷ್ಟು ಚಿತ್ರಗಳನ್ನು ಒಪ್ಪಿಕೊಂಡು ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದಾರೆ. ಅವರು ನಟಿಸಿರುವ 'ತ್ರಯಂಬಕಂ' ಬಿಡುಗಡೆಗೆ ಸಜ್ಜಾಗಿದೆ. ತಮ್ಮ ನಟನಾಜೀವನದ ಸೆಕೆಂಡ್ ಇನಿಂಗ್ಸ್‌ನಲ್ಲಿ ಒಂದರ ಹಿಂದೊಂದರಂತೆ ಸಿನಿಮಾ ಒಪ್ಪಿಕೊಳ್ಳುತ್ತ 25ನೇ ಸಿನಿಮಾ ಗಡಿಯನ್ನು ತಲುಪಿದ್ದಾರೆ.

ಫಣೀಶ್ ಭಾರದ್ವಾಜ್ ನಿರ್ದೇಶಿಸುತ್ತಿರುವ 'ಆಡಿಸಿದಾತ', ರಾಘಣ್ಣನ 25ನೇ ಸಿನಿಮಾ. ಇತ್ತೀಚೆಗೆ ಕಂಠೀರವ ಸ್ಟುಡಿಯೊದಲ್ಲಿ ಚಿತ್ರದ ಮುಹೂರ್ತ ನಡೆದಿದೆ. ಶೀರ್ಷಿಕೆಗೆ ತಕ್ಕ ಹಾಗೆ ಸಿನಿಮಾದಲ್ಲಿನ ಹಲವು ಪಾತ್ರಗಳನ್ನು ಆಡಿಸುವ ಸೂತ್ರಧಾರನ ಪಾತ್ರದಲ್ಲಿ ರಾಘಣ್ಣ ಕಾಣಿಸಿಕೊಂಡಿದ್ದಾರಂತೆ. ಸಾವಿನ ಸಮ್ಮುಖದಲ್ಲಿ ಎದುರಾಗುವ ಬದುಕಿನ ಸತ್ಯಗಳನ್ನು ಕುರಿತಾಗಿ ಈ ಸಿನಿಮಾದಲ್ಲಿ ಹೇಳಲಾಗಿದೆ. 'ಹಣದ ವ್ಯಾಮೋಹ ಮತ್ತು ಮನುಷ್ಯತ್ವ ಈ ಎರಡರಲ್ಲಿ ಯಾವುದು ಮುಖ್ಯ? ಯಾವುದು ಮನುಷ್ಯನನ್ನು ಸುಲಭವಾಗಿ ಸೆಳೆಯುತ್ತದೆ ಎಂಬುದರ ಕುರಿತಾಗಿ ಈ ಸಿನಿಮಾದಲ್ಲಿ ಹೇಳಹೊರಟಿದ್ದೇವೆ' ಎನ್ನುವುದು ಚಿತ್ರತಂಡದ ವಿವರಣೆ.

ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡುವ ಜವಾಬ್ದಾರಿಯನ್ನು ಕದ್ರಿ ಮಣಿಕಾಂತ್ ವಹಿಸಿಕೊಂಡಿದ್ದಾರೆ. ರಾಜ್‌ಕುಮಾರ್ ಹಾಡಿರುವ 'ಬಾನಿಗೊಂದು ಎಲ್ಲೆ ಎಲ್ಲಿದೆ?' ಹಾಡನ್ನು ಮರುಬಳಕೆ ಮಾಡಿಕೊಳ್ಳುವ ಸೂಚನೆಯನ್ನೂ ಅವರು ನೀಡಿದ್ದಾರೆ. ರಾಘಣ್ಣನ ತಂದೆಯಾಗಿ ಭಗವಾನ್ ನಟಿಸುತ್ತಿರುವುದು ಇನ್ನೊಂದು ವಿಶೇಷ.